

ಮದುವೆ ಮಾಡಿಕೊಂಡ ಮೊದಲ ಮೂರು ವರ್ಷಗಳು ಹೇಗೆ ಕಳೆಯುತ್ತದೆ ಎಂದರೇ...

ಮೊದಲ ವರ್ಷ: ಪತಿ ಮಾತಾಡುತ್ತಾನೆ, ಪತ್ನಿ ಕೇಳ್ತಾಳೆ.

ಎರಡನೇ ವರ್ಷ: ಪತ್ನಿ ಮಾತಾಡ್ತಾಳೆ, ಪತಿ ಕೇಳ್ತಾನೆ.

ಮೂರನೇ ವರ್ಷ: ಪತಿ–ಪತ್ನಿ ಇಬ್ಬರೂ ಮಾತಾಡ್ತಾರೆ, ಅಕ್ಕಪಕ್ಕದವರು ಕೇಳ್ತಾರೆ!

★★★

ಅಪ್ಪ: ಏನೋ ಬಡವ! ನಿಮ್ಮಮ್ಮನ ಮೇಲೆ ಹರಿಹಾಯ್ದೆಯಂತೆ?

ಪುಂಡಲೀಕ: ಅಪ್ಪಾ, ನಿನ್ನ ಕೈಲಾಗದ ಕೆಲ್ಸಾನ ನಾನು ಮಾಡಿದ್ದೀನಿ!

★★★

## ನಕ್ಕುಬಿಡಿ

ಕಿಟ್ಟು: ನನ್ನ ಮುಷ್ಟಿಯಲ್ಲಿ ಎಷ್ಟು ಚಾಕ್ಲೆಟ್ ಇದೆಯೋ ಹೇಳು ನೋಡೋಣ?

ಚಿಂಟು: ಹೇಳಿದರೆ ನನಗೊಂದು ಕೊಡಬೇಕು.

ಕಿಟ್ಟು: ಸರಿಯಾಗಿ ಹೇಳಿದರೆ ಎರಡೂ ನಿನಗೆ!

★★★

ಪುಂಡಲೀಕ: ಏನಾದರೂ ಸರಿ, ಕೈಯಿಂದ ಕೈ ಬದಲಾಯಿಸಿದರೆ 'ಸೆಕೆಂಡ್ ಹ್ಯಾಂಡ್' ಅಂತೀವಿ ಒಂದನ್ನು ಬಿಟ್ಟು, ಏನದು?

ತಿಂಗಲೀಕ: ಹಣ!

★★★

ಪತ್ನಿ: ನಾನು ನಿಮ್ಮನ್ನು ಒಂದು ಸಾರಿಯೂ ನೋಡ್ದೆ ಮದುವೆಯಾದೆ ಅಂದರೆ ನಂಬ್ತಿರಾ?

ಪತಿ: ಹೂಂ! ನಾನು ನಿನ್ನನ್ನು ನೋಡಿಯೂ ಮದುವೆಯಾದೆ ಅಂದರೆ ನಂಬ್ತಿಯಾ!?

★★★

ಕಬ್ಬನ್ ಪಾರ್ಕ್‌ನಲ್ಲಿ ಬೆಂಚಿನ ಮೇಲೆ ಕುಳಿತು ಕಳ್ಳೆಕಾಯಿ ತಿನ್ನುತ್ತಿದ್ದರು ರಾಧಾ, ಗೋಪಿ.

ರಾಧಾ: ಗೋಪಿ! ನನಗೆ ಈಗ ಮೂರು ತಿಂಗಳು.

ಗೋಪಿ: ಅಹ್ಹಹ್ಹಾ!

ರಾಧಾ: ಏನ್ ನಗ್ತೀರಾ... ನಾನು ಹೇಳಿದ್ದು ಜೋಕಲ್ಲ!

ಗೋಪಿ: ಹೆಂಗಸರು ತಮ್ಮ ವಯಸ್ಸನ್ನು ಕಡಿಮೆ ಹೇಳ್ತಾರೆ ಅಂತ ಗೊತ್ತು, ಆದರೆ ನೀನವರನ್ನೆಲ್ಲಾ ಮೀರಿಸಿಬಿಟ್ಟೆ ಬಿಡು!

(ಸಂಗ್ರಹ) ಜಿ. ವಿ. ಪ್ರಭು


